ಕರ್ನಾಟಕ ವಿಧಾನಸಭೆ

ಶುಕ್ರವಾರ 11ನೇ ಮಾರ್ಚ್ 2005 ರಂದು

ಸದನವು ವಿಧಾನಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ

12 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು.

ಅಧ್ಯಕ್ಷರು: ಈಗ ಆಯವ್ಯಯ ಪತ್ರದ ಮಂಡನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರಾದ ಶ್ರೀ ಸಿದ್ದರಾಮಯ್ಯನವರು 2005–06ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸುವುದು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಕ್ಷಮಿಸಬೇಕು. ಪ್ರತೀ ಸಲವೂ ಬಜೆಟ್ ಅಧಿವೇಶನವನ್ನು 15 ದಿವಸಕ್ಕೆ ಮಾತ್ರ ಕರೆಯತಕ್ಕಂಥದ್ದು ಸರಿಯಲ್ಲ. ಆಯವ್ಯಯ ಮಂಡನೆ ಮಾಡತಕ್ಕಂಥದ್ದಕ್ಕೆ ಒಂದು ವಿಶಿಷ್ಟವಾದ ಸ್ಥಾನಮಾನವಿದೆ. ಬಜೆಟ್ ಅಧಿವೇಶನವನ್ನು ಕನಿಷ್ಠ ಪಕ್ಷ 30 ದಿವಸಗಳಾದರೂ ಈ ಸದನದಲ್ಲಿ ನಡೆಸಬೇಕು. ಆದರೆ ಪುನ: ಉಪ ಮುಖ್ಯಮಂತ್ರಿಗಳಿಗೆ ಒಳ್ಳೆಯದಾಗಲಿ ಎಂದು, ನಾನು ಶುಭ ಹಾರೈಸುತ್ತೇನೆ. ಅವರು ಮಂಡಿಸತಕ್ಕಂಥ ಆಯವ್ಯಯದಿಂದ ಈ ರಾಜ್ಯಕ್ಕೆ ಒಳ್ಳೆಯದಾಗಲಿ. ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ. .....

ಗೊಂದಲ

ಅಧ್ಯಕ್ಷರು: ಆಯಿತು, ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ಈಗ ತಾವು ಬಜೆಟ್ ಭಾಷಣವನ್ನು ಕೇಳಿ. ಆ ನಂತರ ಅದರ ಬಗ್ಗೆ ಚರ್ಚೆ ಮಾಡಬಹುದು.

ಗೊಂದಲ

1. 2005–06ನೇ ಸಾಲಿನ ಆಯವ್ಯಯ ಅಂದಾಜು ಪತ್ರದ ಮಂಡನೆ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ,

1. ನಾನು ಈಗ ಕರ್ನಾಟಕ ಸರ್ಕಾರದ 2005–06ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ನಾನು ಇದನ್ನು ಪ್ರತಿಭಟಿಸಿ ಹೊರಗಡೆ ಹೋಗುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಕಪ್ಪುಬಟ್ಟೆಯನ್ನು ಧರಿಸಿಕೊಂಡು ಸಭಾತ್ಯಾಗ ಮಾಡಿದರು).